**ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ.**

ಸಿಸಿ ನಂ. 2/2021

| | | |
|---|---|---|
| ಸಾಕ್ಷಿಯ ಹೆಸರು | ಗಂಗಾಧರ್ | ಪಿ.ಡಬ್ಲ್ಯು-1 |
| ತಂದೆಯ ಹೆಸರು | ಲೇಟ್ ಮಂಜೇಗೌಡ | ಸಿ.ಡಬ್ಲ್ಯು-1 |
| ವಯಸ್ಸು | 47 **ವರ್ಷ** | |
| ಉದ್ಯೋಗ | ಮೆಕ್ಯಾನಿಕ್ | ದಿನಾಂಕಃ 15-12-2022. |
| ವಾಸ | ಹರಳಹಳ್ಳಿ, ಹಾಸನ . | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ಎಪಿಪಿ ರವರಿಂದ

ದಿಃ17-08-2020 ರಂದು ನನ್ನ ಸಂಬಂಧಿಕರ ಆರಾಧನಾ ಕಾರ್ಯಕ್ರಮವಿದ್ದು , ಆ ಕಾರ್ಯಕ್ರಮವನ್ನು ಮುಗಿಸಿಕೊಂಡು ಬರುವ ಸಂದರ್ಭದಲ್ಲಿ ನನ್ನ ಅಣ್ಣ ವಾಸುದೇವ್ ರವರಿಗೆ ಅಪಘಾತವಾಗಿರುತ್ತದೆ ಎಂದು ನಮ್ಮ ಸಂಬಂಧಿಕರು ದೂರವಾಣಿ ಮೂಲಕ ನನಗೆ ತಿಳಿಸಿದ್ದು , ನಾನು ಹಾಸನದ ಮಂಗಳಾ ಆಸ್ಪತ್ರೆಗೆ ಹೋಗಿ ನೋಡಲಾಗಿ , ನನ್ನ ಅಣ್ಣನಿಗೆ ಗಾಯಗಳಾಗಿದ್ದು , ವೈದ್ಯರು ಚಿಕಿತ್ಸೆ ನೀಡುತ್ತಿದ್ದು , ಮರುದಿನ ರಾತ್ರಿ 12 ಗಂಟೆ ಸಮಯದಲ್ಲಿ ನನ್ನ ಅಣ್ಣ ವಾಸುದೇವ್ ರವರು ಮರಣ ಹೊಂದಿರುತ್ತಾರೆ. ಈ ವಿಚಾರವನ್ನು ಆಲೂರು ಪೋಲೀಸ್ ಠಾಣೆಯಲ್ಲಿ ತಿಳಿಸಿರುತ್ತೇನೆ. ಪೋಲೀಸರು 2 ದಾಖಲೆಗಳಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ಎರಡು ದಾಖಲೆಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಒಂದು ದೂರಿನ ಪ್ರತಿ ಆಗಿದ್ದು, ಅದನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ ) ಎಂದು ಗುರುತಿಸಲಾಯಿತು. ಮತ್ತೊಂದು ದಾಖಲೆ ಕೃತ್ಯಸ್ಥಳ ಮಹಜರ್ ಆಗಿದ್ದು , ಅದನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರಲ್ಲಿರುವ ಯಾವ ವಿಚಾರಗಳು ನನಗೆ ತಿಳಿದಿರುವುದಿಲ್ಲ. ಸಾಕ್ಷಿಯು ಕೆಎ-13-ಎಕ್ಸ್-5382 ರ ವಾಹನದ ಪೋಟೋಗಳನ್ನು ನೋಡಿ ಗುರುತಿಸಿದ್ದು , 2 ಪೋಟೋಗಳನ್ನು ಒಟ್ಟಾಗಿ ನಿಪಿ-3 ಎಂದು, ಸಿ.ಡಿ.ಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಸದರಿ ವಾಹನಗಳನ್ನು ನನ್ನ ಅಣ್ಣ ಮೃತ

ವಾಸುದೇವ್ ರವರು ಓಡಿಸುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿಯು ಕೃತ್ಯಸ್ಥಳ ಮಹಜರಿನಲ್ಲಿರುವ ಪೋಟೋವನ್ನು ನೋಡಿ ಗುರುತಿಸಿದ್ದು , ಸದರಿ ಪೋಟೋವನ್ನು ನಿಪಿ-4 ಎಂದು ಗುರುತಿಸಲಾಯಿತು. ಸದರಿ ಪೋಟೋವನ್ನು ಎಲ್ಲಿ , ಯಾವಾಗ , ಯಾರು ತೆಗೆದಿರುತ್ತಾರೆಂದು ತಿಳಿದಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿ ರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಸರ್ಕಾರಿ ವಕೀಲರು ಕೇಳಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಪಾಟೀಸವಾಲು ಮಾಡಲು ಅವಶ್ಯಕವೆಂದು ಮನಗಂಡು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಎಪಿಪಿ ರವರಿಂದ

ದಿಃ15-08-2020 ರಂದು ನನ್ನ ಚಿಕ್ಕಪ್ಪ ಕೃಷ್ಣೇಗೌಡರವರು ಮೃತರಾಗಿದ್ದು , ಅವರ ಮರಣಾನಂತರ ಕಾರ್ಯಗಳನ್ನು ಮಾಡಲು ದಿಃ17-08-2020 ರಂದು ನಾನು ಮತ್ತು ನನ್ನ ಕುಟುಂಬದವರು ಕದಾಳು ರಸ್ತೆಯಲ್ಲಿರುವ ಜಮೀನಿನ ಬಳಿ ಹೋಗಿದ್ದೆವು ಎಂದರೆ ಸರಿಯಲ್ಲ. ನಂತರ ಅದೇ ದಿನ ಮೃತ ವಾಸುದೇವ್ ರವರು ಕೆಎ-13-ಎಕ್ಸ್-5382 ರ ಬೈಕಿನಲ್ಲಿ ಚಾಲನೆ ಮಾಡಿಕೊಂಡು ಬರುತ್ತಿದ್ದು , ಅವರ ಹಿಂದೆ ನಾನು ನನ್ನ ಬೈಕಿನಲ್ಲಿ ಬರುತ್ತಿದ್ದೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ನನ್ನ ಹಿಂದಿನ ಬೈಕ್ ಸವಾರ ಅವರ ಕೆಎ-13-ಕೆ-6066 ರ ಬೈಕನ್ನು ಓವರ್ ಟೇಕ್ ಮಾಡಿಕೊಂಡು ಬಂದು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ , ನನ್ನ ಅಣ್ಣನ ಬೈಕಿಗೆ ಹಿಂಬದಿಯಿಂದ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿಯು ನಿಲ್ಲಿಸದೆ ತನ್ನ ಬೈಕನ್ನು ಚಾಲನೆ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದಿಂದ ಗಾಯಗೊಂಡಿದ್ದ ಮೃತ ವಾಸುದೇವ್ ರವರನ್ನು ನಾನು ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನನ್ನ ಅಣ್ಣ ಅಪಘಾತದಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿ , ನಾನು ಆರೋಪಿಯ ವಿರುದ್ಧ ಪೋಲೀಸರಿಗೆ ದೂರು ನೀಡಿದ್ದೇನೆಂದರೆ ಸರಿಯಲ್ಲ. ದಿಃ19-08-2020 ರಂದು ನಾನು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ-3 ಮತ್ತು 6 ರವರ ಸಮಕ್ಷಮ ಪೋಲೀಸರು ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ

ಮಹಜರ್ ಕ್ರಮ ಜರುಗಿಸಿ ದರು ಎಂದರೆ ಸರಿಯಲ್ಲ . ಆ ಸಮಯದಲ್ಲಿ ನನ್ನ ಅಣ್ಣನ ವಾಹನವನ್ನು ಪೋಲೀಸರು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ-

ಆರೋಪಿಯ ಪರ ವಕೀಲರು ಹಾಜರಿದ್ದು , ಪಾಟೀಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.,
ಆಲೂರು.